ಕಾಮಗಾರಿಗಳನ್ನು ಪ್ರಾರಂಭಿಸಲು ವಿಳಂಬ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 14 : (92)

ಮಾನ್ಯ ಸದಸ್ಯರ ಹೆಸರು : ಶ್ರೀ ವಿಶ್ವನಾಥ ಚಂದ್ರಶೇಖರ ಮಾಮನಿ (ಸವದತ್ತಿ ಯಲ್ಲಮ್ಮ)

ಉತ್ತರಿಸುವ ಸಚಿವರು : ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು)

ಕ್ರ. ಸಂ.	ಪ್ರಶ್ನೆ	ಉತ್ತರ
1.	ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಗೋಕಾಕ - ನರಗುಂದ ರಾಜ್ಯ ಹೆದ್ದಾರಿಯ ಮೇಲೆ ಮುನವಳ್ಳಿ ಗ್ರಾಮದ ಹತ್ತಿರ ಹಾಗೂ ಬೆನಕಟ್ಟಿ ಗ್ರಾಮದ ಹತ್ತಿರ ಮತ್ತು ಸವದತ್ತಿ ಹಂಚಿನಾಳ ರಸ್ತೆ ಯಲ್ಲಮ್ಮ ದೇವಸ್ಥಾನದ ಹತ್ತಿರ ಸೇತುವೆ ನಿರ್ಮಿಸುವ ಕೆಲಸಗಳು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ (ಕೆ.ಆರ್.ಡಿ.ಸಿ.ಎಲ್.) ವತಿಯಿಂದ ಕಳೆದ ವರ್ಷ ಮಂಜೂರಾಗಿದ್ದರೂ ಈ ಕಾಮಗಾರಿಗಳನ್ನು ಪ್ರಾರಂಭಿಸಲು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
2.	ಹಾಗಿದ್ದಲ್ಲಿ, ಈ ಮೂರು ಸೇತುವೆ ಕಾಮಗಾರಿಗಳನ್ನು ಎಂದಿನಿಂದ ಪ್ರಾರಂಭಿಸಲಾಗುವುದು;	1. ಬೆಳಗಾವಿ ಜಿಲ್ಲೆಯ ಗೋಕಾಕ-ನರಗುಂದ ರಾಜ್ಯ ಹೆದ್ದಾರಿಯ 48.20 ಕಿ.ಮೀ.ರಲ್ಲಿ ರೂ.250 ಲಕ್ಷಗಳ ಅಂದಾಜು ಮೊತ್ತದಲ್ಲಿ ಸೇತುವೆ ನಿರ್ಮಾಣ ಕಾಮಗಾರಿಯು ಎರಡನೇ ಹಂತದ ಸೇತುವೆ ನಿರ್ಮಾಣ ಯೋಜನೆಯಲ್ಲಿ ಮಂಜೂರಾಗಿರುತ್ತದೆ. ಇದರಂತೆ ಹಾಲಿ ಸೇತುವೆ ಇರುವ ಸ್ಥಳದಲ್ಲಿಯೇ ಹೊಸ ಸೇತುವೆ ನಿರ್ಮಾಣ ಮಾಡುವುದಾಗಿತ್ತು. ಆದರೆ ಸ್ಥಳೀಯರ ಒತ್ತಾಯದ ಮೇರೆಗೆ ಸೇತುವೆಯ ನಿರ್ಮಾಣವನ್ನು ಹಾಲಿ ಸೇತುವೆಯ ಮೇಲ್ಭಾಗದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ. ಅದರ ಪ್ರಕಾರ ವಿನ್ಯಾಸ ಮತ್ತು

		ಅಂದಾಜು ಪಟ್ಟಿಯನ್ನು ತಯಾರಿಸಲಾಗಿ, ಸೇತುವೆಯ ನಿರ್ಮಾಣದ ಅಂದಾಜು ಮೊತ್ತವು ಈ ಮೊದಲು ಅನುಮೋದಿತ ಮೊತ್ತವಾದ ರೂ.250 ಲಕ್ಷಗಳಿಗೆ ಬದಲಾಗಿ ರೂ.650 ಲಕ್ಷಗಳಾಗಿರುತ್ತದೆ. ಈ ಪ್ಯಾಕೇಜಿನ ಗುತ್ತಿಗೆಯ ಅವಧಿಯು ಮುಗಿದಿದ್ದು, ಅಂದಾಜು ಮೊತ್ತದಲ್ಲಿ ಹೆಚ್ಚುವರಿಯಾಗಿರುವು ದರಿಂದ ಅನುದಾನದ ಲಭ್ಯತೆ ಮೇರೆಗೆ ಈ ಸೇತುವೆ ಕಾಮಗಾರಿಯನ್ನು ಮುಂದಿನ ಸೇತುವೆ ನಿರ್ಮಾಣ ಪ್ಯಾಕೇಜಿನಲ್ಲಿ ತೆಗೆದುಕೊಳ್ಳುವ ಬಗ್ಗೆ ಪರಿಶೀಲಿಸ ಲಾಗುವುದು. **2. ಗೋಕಾಕ - ನರಗುಂದ ರಸ್ತೆಯ ಬೆನಕಟ್ಟಿ ಗ್ರಾಮದ ಹತ್ತಿರ ಕಿ.ಮೀ.40.80 ರಲ್ಲಿ ಸೇತುವೆ ನಿರ್ಮಾಣ.** ಈ ಸೇತುವೆಯ ಕಾಮಗಾರಿಯು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ಮೂರನೇ ಹಂತದ ಸೇತುವೆಯ ನಿರ್ಮಾಣದ ಯೋಜನೆಯ ಅಡಿಯಲ್ಲಿ ರೂ.45.00 ಲಕ್ಷಗಳ ಅಂದಾಜು ಮೊತ್ತದಲ್ಲಿ ಅನುಮೋದನೆಗೊಂಡಿರುತ್ತದೆ. ಈ ಸೇತುವೆಗೆ ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಭೂಸ್ವಾಧೀನದ ಪ್ರಕ್ರಿಯೆ ಪೂರ್ಣಗೊಂಡ ನಂತರ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು. **3. ಸವದತ್ತಿ - ಹಂಚಿನಾಳ ರಸ್ತೆಯ ಕಿ.ಮೀ.5.70 ರಲ್ಲಿ ಸೇತುವೆ ನಿರ್ಮಾಣ.** ಈ ಸೇತುವೆಯ ಕಾಮಗಾರಿಯು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ನಾಲ್ಕನೇ ಹಂತದ ಸೇತುವೆಯ ನಿರ್ಮಾಣ ಯೋಜನೆಯಲ್ಲಿ ರೂ.120.00 ಲಕ್ಷಗಳ ಅಂದಾಜು ಮೊತ್ತದಲ್ಲಿ ಅನುಮೋದನೆಯಾಗಿರುತ್ತದೆ. ಸದರಿ ಸೇತುವೆಯ ಸರ್ವೆ ಮತ್ತು ಮಣ್ಣಿನ ಪರೀಕ್ಷೆಯನ್ನು ಪೂರ್ತಿಗೊಳಿಸಿದ್ದು, ವಿನ್ಯಾಸ ತಯಾರಿಕೆಯ ಕಾರ್ಯವು ಪ್ರಗತಿಯಲ್ಲಿದ್ದು, ಇದಾದನಂತರ ಕಾಮಗಾರಿಯನ್ನು ಶೀಘ್ರದಲ್ಲಿ ಪ್ರಾರಂಭಿಸಲಾಗುವುದು.

ಶ್ರೀ ವಿಶ್ವನಾಥ ಚಂದ್ರಶೇಖರ ಮಾಮನಿ : ಮಾನ್ಯ ಅಧ್ಯಕ್ಷರೆ, ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಗೋಕಾಕ - ನರಗುಂದ ರಾಜ್ಯ ಹೆದ್ದಾರಿ ಮೇಲಿನ ಮುನವಳ್ಳಿ ಗ್ರಾಮ ಹಾಗೂ ಬೆನಕಟ್ಟಿ ಗ್ರಾಮದ ಹಾಗೂ ಸವದತ್ತಿ ಹಂಚಿನಾಳ ಯಲ್ಲಮ್ಮ ದೇವಸ್ಥಾನದ ಹತ್ತಿರ ನಿರ್ಮಿಸುವಂಥ ಸೇತುವೆಗಳು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ (ಕೆ.ಆರ್.ಡಿ.ಸಿ.ಎಲ್.) ವತಿಯಿಂದ ಕಳೆದ ವರ್ಷ ಮಂಜೂರಾಗಿದ್ದರೂ ಈ ಕಾಮಗಾರಿಗಳನ್ನು ಪ್ರಾರಂಭಿಸಲು ವಿಳಂಬವಾಗುತ್ತಿದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೋ, ಹೇಗೆ? ಹಾಗಿದ್ದಲ್ಲಿ ಈ ಮೂರು ಸೇತುವೆಗಳ ಕಾಮಗಾರಿಗಳನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಸಿ. ಎಂ. ಉದಾಸಿ : ಮಾನ್ಯ ಅಧ್ಯಕ್ಷರೆ, ನಾವು ಈ ಬಗ್ಗೆ ಉತ್ತರದಲ್ಲಿ ಸ್ಪಷ್ಟವಾಗಿ ಹೇಳಿದ್ದೇವೆ. ಮೊದಲನೆಯ ಸೇತುವೆ ಏನು ಇದೆ, ಅದಕ್ಕೆ ಎರಡೂವರೆ ಕೋಟಿ ರೂಪಾಯಿಗಳಲ್ಲಿ ಆಗಬೇಕಾಗಿರುವಂಥ ಸೇತುವೆಗೆ ಮೊದಲು ಗೊತ್ತುಪಡಿಸಿದ ಸ್ಥಳವನ್ನು ಬದಲಾವಣೆ ಮಾಡಿದ್ದರಿಂದ ಅದಕ್ಕೆ ಆರೂವರೆ ಕೋಟಿ ರೂಪಾಯಿಗಳ ವೆಚ್ಚವಾಗುತ್ತಿರುವುದರಿಂದ ಹಣಕಾಸಿನ ಲಭ್ಯತೆಯ ಮೇಲೆ ನಂತರ ಈ ಕಾಮಗಾರಿಯನ್ನು ತೆಗೆದುಕೊಳ್ಳಲಾಗುವುದೆಂದು ಈಗಾಗಲೇ ಸೂಚನೆಯನ್ನು ಕೊಟ್ಟಿದ್ದೇನೆ. ಇದರ ಜೊತೆಗೆ ಎರಡನೆಯ ಸೇತುವೆ ಗೋಕಾಕ - ನರಗುಂದದ ಹತ್ತಿರ ಬೆನಕಟ್ಟಿ ಸೇತುವೆಯ ಬಗ್ಗೆ ಈಗಾಗಲೇ ಭೂ ಸ್ವಾಧೀನ ಪ್ರಕ್ರಿಯೆ ಮುಗಿದಿರುವುದರಿಂದ ಅತಿ ಶೀಘ್ರದಲ್ಲಿ ಕಾಮಗಾರಿಯನ್ನು ಪ್ರಾರಂಭ ಮಾಡುತ್ತೇವೆ, ಹಾಗೂ ಸವದತ್ತಿ ಹೆಂಚಿನಾಳ ರಸ್ತೆಯಲ್ಲಿರುವ ಸೇತುವೆಯನ್ನೂ ಸಹಿತ ಶೀಘ್ರದಲ್ಲಿ ಪ್ರಾರಂಭ ಮಾಡುತ್ತೇವೆ. ಈ ಎರಡು ಸೇತುವೆಗಳನ್ನು ತೆಗೆದುಕೊಂಡಿದ್ದೇವೆ. ಮೊದಲನೆಯ ಸೇತುವೆ ಆರು ಕೋಟಿ ಐವತ್ತು ಲಕ್ಷ ರೂಪಾಯಿಗಳ ಸೇತುವೆಯಾಗಿದ್ದು ಅದಕ್ಕೆ ಸ್ವಲ್ಪ ಸಮಯಾವಕಾಶ ಬೇಕಾಗುತ್ತದೆ. ಅದನ್ನೂ ಸಹಿತ ಕಾರ್ಯಗತಗೊಳಿಸುತ್ತೇವೆಂದು ಭರವಸೆಯನ್ನು ಕೊಡುವುದಕ್ಕೆ ಇಚ್ಛಿಸುತ್ತೇನೆ.

ಶ್ರೀ ಅಮರೇಗೌಡ ಬಯ್ಯಾಪುರ : ಮಾನ್ಯ ಅಧ್ಯಕ್ಷರೆ, ನನ್ನದು ಒಂದು ಸಣ್ಣ clarification ಇದೆ.

ಅಧ್ಯಕ್ಷರು : ಸವದತ್ತಿಯ ಬಗ್ಗೆಯೇ? ನಿಮ್ಮ ಕ್ಷೇತ್ರಕ್ಕೆ ಸೇರಿದ್ದಲ್ಲ.

ಶ್ರೀ ಅಮರೇಗೌಡ ಬಯ್ಯಾಪುರ : ರಾಜ್ಯಕ್ಕೆ ಸಂಬಂಧ ಪಡುತ್ತದೆ.

ಅಧ್ಯಕ್ಷರು : ನಾನು ಇದಕ್ಕೆ ಏಲೋ ಮಾಡುವುದಿಲ್ಲ. ಮುಂದಿನ ಪ್ರಶ್ನೆ ಮಾನ್ಯ ಗೋಪಾಲ ಭಂಡಾರಿಯವರೆ ಕೇಳಿ.

ಶ್ರೀ ಅಮರೇಗೌಡ ಬಯ್ಯಾಪುರ : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು : ತಾವು ರಾಜ್ಯದ ಬಗ್ಗೆ ಕೇಳುವುದಕ್ಕೆ ಹೋಗಬೇಡಿ. ನಿವು ಪ್ರತ್ಯೇಕ notice ಕೊಡಿ. ಈ ಪ್ರಶ್ನೆ ಸವದತ್ತಿಗೆ ಸಂಬಂಧಪಟ್ಟಿದ್ದು, ಅವರು ಕೇಳಿದ್ದಾರೆ. I will not allow. ಮಾನ್ಯ ಗೋಪಾಲ ಭಂಡಾರಿಯವರೆ ತಾವು ಪ್ರಶ್ನೆಯನ್ನು ಕೇಳಿ.

ಶ್ರೀ ಅಮರೇಗೌಡ ಬಯ್ಯಾಪುರ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರಿಗೆ ಅಧಿಕಾರಿಗಳು ತಪ್ಪು ಮಾಹಿತಿಗಳನ್ನು ಕೊಡುತ್ತಿದ್ದಾರೆ. ಸದನಕ್ಕೆ ತಪ್ಪು ಮಾಹಿತಿಗಳನ್ನು ಕೊಡಿಸುತ್ತಿದ್ದಾರೆ.

ಅಧ್ಯಕ್ಷರು : ನೀವು ಸವದತ್ತಿಗೆ ಸಂಬಂಧಪಟ್ಟಂತೆ ಕೇಳುವುದಾದರೆ ಕೇಳಿ.

ಶ್ರೀ ಅಮರೇಗೌಡ ಬಯ್ಯಾಪುರ : ಮಾನ್ಯ ಅಧ್ಯಕ್ಷರೆ, ನೀವೇ ನಮ್ಮ ನೆರವಿಗೆ ಬರದೇ ಹೋದರೆ ಹೇಗೆ?

ಅಧ್ಯಕ್ಷರು : ನಾನು ಇದಕ್ಕೆ allow ಮಾಡುವುದಿಲ್ಲ. ಇದು question hour, ನಿಮಗೆ ಬೇಕಾದಷ್ಟು ಅವಕಾಶಗಳು ಇವೆ. ತಾವು ಬೇಕಾದರೆ calling attention, demand ಮೇಲೆ ಮಾತನಾಡಿ. ನೀವು ಈ ರೀತಿ ವಾದ ಮಾಡುವಂಥಾದ್ದು ಸರಿಯಲ್ಲ. ನಾನು ಒಂದು ಸಲ ಹೇಳಿದ ಮೇಲೆ ಕುಳಿತುಕೊಳ್ಳಿ. ನೀವೆಲ್ಲಾ seniorಗಳು question hourನಲ್ಲಿ ಏನು ಕೇಳಬೇಕೆಂದು ನಿಮಗೆ ಗೊತ್ತಿದೆ. ಮಾನ್ಯ ಗೋಪಾಲ ಭಂಡಾರಿಯವರೆ ತಾವು ಪ್ರಶ್ನೆ ಕೇಳಿ.

ಅರಣ್ಯ ವಾಸಿಗಳಿಗೆ ಹಕ್ಕು ಪತ್ರವನ್ನು ಕೊಡುವ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 15 : (55)

ಸದಸ್ಯರ ಹೆಸರು : ಶ್ರೀ ಗೋಪಾಲ ಭಂಡಾರಿ ಹೆಚ್. (ಕಾರ್ಕಳ)

ಉತ್ತರಿಸುವವರು : ಶ್ರೀ ಬಿ. ಎಸ್. ಯಡಿಯೂರಪ್ಪ (ಮುಖ್ಯ ಮಂತ್ರಿಗಳು)

ಕ್ರ. ಸಂ.	ಪ್ರಶ್ನೆ	ಉತ್ತರ
ಅ.	ಅರಣ್ಯದಲ್ಲಿ ಅನೇಕ ವರ್ಷಗಳಿಂದ ವಾಸ್ತವ್ಯವಿದ್ದ ಮತ್ತು ಕೃಷಿ ಮಾಡಿದ ಜಮೀನನ್ನು ಫಲಾನುಭವಿಗಳಿಗೆ ವಿತರಿಸಲು ರಾಜ್ಯದ ಯಾವ ಯಾವ ತಾಲ್ಲೂಕುಗಳಲ್ಲಿ ಯಾರು ಯಾರಿಗೆ ಎಷ್ಟೆಷ್ಟು ವಿತರಿಸಲು ಬಾಕಿ ಇದೆ;	ಗ್ರಾಮ ಸಭೆ ಅರ್ಹ ಫಲಾನುಭವಿಗಳಿಗೆ ಮತ್ತು ಅವರು ಉಪಯೋಗಿಸುವ ಅರಣ್ಯ ಪ್ರದೇಶ ತಾಲ್ಲೂಕುವಾರು ಅರ್ಹ ಬುಡಕಟ್ಟು ಜನಾಂಗದ ಮತ್ತು ಸಾಂಪ್ರದಾಯಿಕ ಅರಣ್ಯ ನಿವಾಸಿಗಳು ಹೊಂದಿರುವ ಪ್ರದೇಶದ ವಿವರಗಳನ್ನು ಸಂಗ್ರಹಿಸುವ ಕಾರ್ಯ, ಗ್ರಾಮಸಭೆಗಳಿಂದ ನಡೆಯುತ್ತಿದ್ದು ಅವುಗಳಿಂದ ಅರ್ಹ ಫಲಾನುಭವಿಗಳ ಮಾಹಿತಿ ಬಂದ ನಂತರ ಅರ್ಹ ಫಲಾನುಭವಿಗಳಿಗೆ ಜಮೀನು ಉತ್ಪನ್ನಗಳ ಹಕ್ಕು ಪತ್ರಗಳನ್ನು ವಿತರಿಸಲು ಕ್ರಮ ತೆಗೆದುಕೊಳ್ಳಲಾಗುವುದು.
ಆ.	ಭಾರತ ಸರ್ಕಾರ ಲೋಕಸಭೆಯಲ್ಲಿ ಮಂಜೂರು ಮಾಡಿದ ಅರಣ್ಯ	ಬುಡಕಟ್ಟು ಮತ್ತು ಸಾಂಪ್ರದಾಯಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕು ಮಾನ್ಯತೆ) ಕಾಯ್ದೆ 2006 ಮತ್ತು